## ಅನುಬಂಧ-01

ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಅನ್ವಯಿಸುವ ವಿಶೇಷ ಸೂಚನೆಗಳು:

1. ಮಂಗಳೂರು ತಾಲ್ಲೂಕು & ಮಂಗಳೂರು ನಗರ ಹೊರತುಪಡಿಸಿ ಉಳಿದ ಉಪನೋಂದಣಿ ಕಛೇರಿಗಳ ವ್ಯಾಪ್ತಿಗೆ ಬರುವ ಕೃಷಿ ಜಮೀನುಗಳಿಗೆ ಈ ಕೆಳಕಂಡ ದರಗಳು ಅನ್ವಯಿಸುವುದು..

| | | |
|---|---|---|
| i | ಕೃಷಿ ಜಮೀನು 12.50 ಸೆಂಟ್ಸ್ ಮತ್ತು ಅದಕ್ಕಿಂತ ಕಡಿಮೆ ಇದ್ದಲ್ಲಿ | ಸಂಬಂಧಿಸಿದ ಆಯಾ ಪ್ರದೇಶದ ನಿವೇಶನ ದರ ಅಳವಡಿಸತಕ್ಕದ್ದು. |
| ii | 12.50 ಸೆಂಟ್ಸ್ ಮೇಲ್ಪಟ್ಟು 19 ಸೆಂಟ್ಸ್ ವರೆಗೆ ವಿಸ್ತೀರ್ಣದ ಜಮೀನಿಗೆ | ಸಂಬಂಧಿಸಿದ ಆಯಾ ಪ್ರದೇಶದ ನಿವೇಶನ ದರದಲ್ಲಿ 70% ರಷ್ಟು ದರ ಅಥವಾ ಕೃಷಿ ಜಮೀನಿನ ಪೈಕಿ ಯಾವುದು ಹೆಚ್ಚೋ ಆ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ) ಬೆಲೆ ಅಳವಡಿಸತಕ್ಕದ್ದು. |
| iii | 19 ಸೆಂಟ್ಸ್ ಮೇಲ್ಪಟ್ಟು 25 ಸೆಂಟ್ಸ್ ವರೆಗೆ | ಸಂಬಂಧಿಸಿದ ಆಯಾ ಪ್ರದೇಶದ ನಿವೇಶನ ದರದಲ್ಲಿ 50% ರಷ್ಟು ದರ ಅಥವಾ ಕೃಷಿ ಜಮೀನಿನ ಪೈಕಿ ಯಾವುದು ಹೆಚ್ಚೋ ಆ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ) ಬೆಲೆ ಅಳವಡಿಸತಕ್ಕದ್ದು. |

2. **ಸಿವಿಸಿ ನಿಯಮಗಳು 2003 ರ ನಿಯಮ 6(2)(a) ರನ್ವಯ:**

25 ಸೆಂಟ್ಸ್‌ಗಳಿಗೆ ಮೇಲ್ಪಟ್ಟ ಕೃಷಿಯೇತರ *ಅಭಿವೃದ್ಧಿಹೊಂದದ ಜಮೀನು (ಪೂರ್ಣ ವಿಸ್ತೀರ್ಣ) ಪರಭಾರೆ ಮಾಡಿದಾಗ ಈ ಕೆಳಕಂಡಂತೆ ದರಗಳು ಅನ್ವಯಿಸುವುದು.

| | | |
|---|---|---|
| ಅ | 25 ಸೆಂಟ್ಸ್ ಅಥವಾ ಕಡಿಮೆ ವಿಸ್ತೀರ್ಣಕ್ಕೆ | ಆಯಾ ಪ್ರದೇಶದ ನಿವೇಶನದ ದರ |
| ಆ | 25 ಸೆಂಟ್ಸ್ ಮೇಲ್ಪಟ್ಟ 50 ಸೆಂಟ್ಸ್ ವರೆಗೆ | ಅ+ಆಯಾ ಪ್ರದೇಶದ ನಿವೇಶನದ 90% ದರ |
| ಇ | 50 ಸೆಂಟ್ಸ್ ಮೇಲ್ಪಟ್ಟ 75 ಸೆಂಟ್ಸ್ ವರೆಗೆ | ಅ+ಆ+ಆಯಾ ಪ್ರದೇಶದ ನಿವೇಶನದ 80% ದರ |
| ಈ | 75 ಸೆಂಟ್ಸ್ ಮೇಲ್ಪಟ್ಟು | ಅ+ಆ+ಇ+ಆಯಾ ಪ್ರದೇಶದ ನಿವೇಶನದ 70% ದರ |